ತಿನ್ನಿಸುತ್ತಿದ್ದಳು. ಆ ಹಕ್ಕಿಗಳಾದರೋ ಅಮ್ಮನ ಕೈಯಿಂದ ಚೆಲ್ಲಬಹುದಾದ ಆಹಾರ ತುಣುಕುಗಳನ್ನು ಹೆಕ್ಕಿ ತಿನ್ನುವ ಆಸೆಯಿಂದ ಅಲ್ಲೇ ಕೂರುತ್ತಿದ್ದವು. ಕ್ರಮೇಣ ತಮ್ಮ ಉಣ್ಣುವಾಗ ಅಮ್ಮ ಬಳಸುವ ತಂತ್ರಗಳು ನಾಲ್ಕೈದು ವರ್ಷದ ವಯಸ್ಸಿನ ನನಗೆ ಅರ್ಥವಾಗಿ ಗೊಳ್ಳನೆ ನಗುತ್ತಿದ್ದೆ. ''ಈಗ ನಗ್ತೀಯಾ... ನಿನಗೂ ಚಿಕ್ಕವನಿದ್ದಾಗ ಹೀಗೆಯೇ ತಿನ್ನಿಸಿದ್ದು ನಾನು'' ಎನ್ನುತ್ತಿದ್ದಳು ಅಮ್ಮ. ಅಮ್ಮನ ಜೀವಮಾನದ ಸಾಧನೆ ಎಂದರೆ ನಮ್ಮನ್ನು ಬೆಳೆಸಿದ್ದು. ನಿದ್ದೆಯಿಂದೆದ್ದ ಸಣ್ಣತಮ್ಮನನ್ನು ಸೊಂಟದಲ್ಲಿರಿಸಿಕೊಂಡೇ ನಾವು ಮೂವರನ್ನು ಶಾಲೆಗೆ ಹಾಗೂ ಅಪ್ಪನನ್ನು ಆಫೀಸಿಗೆ ಸಮಯಕ್ಕೆ ಸರಿಯಾಗಿ ಸಿದ್ಧಪಡಿಸಿ ಕಳುಹಿಸುತ್ತಿದ್ದ ಆಕೆಯ ಚಾಕಚಕ್ಯತೆ ಇನ್ನೊಮ್ಮೆ ಕಣ್ಣೆದುರು ಹಾದು ಹೋಯಿತು. ಅಮ್ಮನಿಗೆ ರಾತ್ರಿ ಫೋನ್ ಮಾಡಿ ನಮ್ಮ ಬಾಲ್ಯವನ್ನು ನೆನಪಿಸಿದ ಈ ಹಕ್ಕಿಯ ಕತೆ ಹೇಳಬೇಕು ಎಂದುಕೊಂಡೆ.

ಈ ಹಕ್ಕಿ ಬಂದು ಕಾರಿನ ಮೇಲೆ ಯಾಕೆ ಕೂತಿದೆ? ಸಂಶಯ ಬಂತು ನನಗೆ. ಹಿಂದಿನ ದಿನ ರಾತ್ರಿ ಕಾರಿನ ಮೇಲ್ಯಾರಾದರೂ ಕಾಳು ಅಗುಳು ಚೆಲ್ಲಿದ್ದಾರೆಯೇ? ಗಾಜಿನ ತೀರ ಹತ್ತಿರಕ್ಕೆ ಎದುರು ಬಗ್ಗಿ ನೋಡಿದೆ. ಅಲ್ಲೇನೂ ಕಾಣಿಸಲಿಲ್ಲ. ಬೆಳಗ್ಗೆ ಇತ್ತೇನೋ, ತಿಂದು ಮುಗಿಸಿದ ಹಕ್ಕಿ ಇನ್ನೂ ಸಿಗಬಹುದೆಂದು ಅಲ್ಲೇ ಕುಳಿತಿರಬಹುದು ಎನಿಸಿತ್ತು. ನಾನು ಹೊರಟು ಅದಾಗಲೇ ಹತ್ತು ನಿಮಿಷವಾಗಿತ್ತು. ಕಡಿಮೆಯೆಂದರೂ ಮೂರು ಕಿ.ಮೀ. ಕ್ರಮಿಸಿದ್ದೆ. ಈ ಮೂರು ಕಿ.ಮೀ. ಉದ್ದಕ್ಕೂ ಆ ಹಕ್ಕಿಗೆ ತಾನು ತನ್ನ ನೆಲೆಯಿಂದ ದೂರ ಹೋಗುತ್ತಿದ್ದೇನೆ ಎಂಬ ಅರಿವೇ ಆಗಿಲ್ಲವೇ? ಇದು ಹನ್ನೆರಡು ಕಿ.ಮೀ. ನನ್ನೊಂದಿಗೇ ಬಂದರೆ ಅದರ ಕುಟುಂಬದಿಂದ ದೂರವಾಗುವ ಸಂಭವ ಇದೆ ಎಂದನಿಸಿ ನನಗೆ ಚಿಂತೆಯಾಯಿತು. ನನ್ನ ಕಾರಲ್ಲಿ ವೈಪರಿಗೆ ನೀರು ಚಿಮ್ಮಿಸಿ ಗಾಜನ್ನು ಒರೆಸುವ ಸೌಕರ್ಯವಿತ್ತು. ಸ್ವಲ್ಪ ನೀರು ಚಿಮ್ಮಿಸಿ ವೈಪರ್ ಹಾಕಿದೆ. ಹಕ್ಕಿ ವೈಪರಿನಿಂದೆದ್ದು ಕಾರಿನ ಟಾಪ್ ಮೇಲೆ ಹಾರಿತು. ಸಮಾಧಾನದಿಂದ ನಾನು ನಿಟ್ಟುಸಿರು ಬಿಟ್ಟು ವೈಪರ್ ನಿಲ್ಲಿಸಿದ್ದೇ ತಡ, ಪುನಃ ಬಂದು ವೈಪರಿನಲ್ಲಿ ಕುಳಿತಿತು. ಸಾಲದ್ದಕ್ಕೆ ಬಾಯಾರಿಕೆಯೂ ಆಗಿತ್ತೇನೋ, ಗಾಜಿನ ಮೇಲೆ ಅಲ್ಲಲ್ಲಿದ್ದ ಹನಿ ಹನಿ ನೀರನ್ನು ಕೊಕ್ಕಿನಿಂದ ಚಪ್ಪರಿಸಿ ಕುಡಿದು ರೆಕ್ಕೆ ಬಡಿದು ಸಂತೋಷ ಸೂಚಿಸಿತು.

ಇನ್ನು ಅರ್ಧ ತಾಸು ಇದು ಇಲ್ಲೇ ಕೂತಿದ್ದರೆ ದಾರಿ ತಪ್ಪಿ ತನ್ನ ನೆಲೆಗೆ ಹಿಂತಿರುಗಲಾಗದೆ ತೊಂದರೆಗೀಡಾಗುತ್ತೆ ಅಂತ ಬಾರಿ ಬಾರಿಗೂ ಅನ್ನಿಸಿದ್ದರಿಂದ ಮುಂದಿನ ಸಿಗ್ನಲಿನಲ್ಲಿ ಅರ್ಜೆಂಟಾಗಿ ಕಾರಿಳಿದು ಎರಡೂ ಕೈತಟ್ಟಿ ಹೋ ಎಂದು ಹಕ್ಕಿಯನ್ನು ಓಡಿಸಲು ಪ್ರಯತ್ನಿಸಿದೆ. ಹಕ್ಕಿ ನನ್ನ ಕಾರಿನಿಂದ ಮೇಲೆ ಹಾರಿತಾದರೂ ನಾನು ವಾಪಸ್ ಕಾರ್ ಹತ್ತಿ ಬೆಲ್ಟ್ ಹಾಕುವಷ್ಟರಲ್ಲಿ ಪಕ್ಕದ ಐಶಾರಾಮಿ ಕಾರಿನ ಎಡಬದಿಯ ಕನ್ನಡಿಯ ಮೇಲೆ ಕೂತಿತು. ಮಾತ್ರವಲ್ಲ, ನನ್ನ ಆರ್ಭಟಕ್ಕೆ ಬೆದರಿತ್ತೋ ಏನೋ, ಕುಳಿತಲ್ಲಿಯೇ ಕನ್ನಡಿ ಮೇಲೆ ಪಿಚಿಕೆ ಹಾಕಿತು. 'ಲಕ್ಷ ಲಕ್ಷ ಹಣ ಚೆಲ್ಲಿದ ನನ್ನ ಐಶಾರಾಮಿ ಕಾರು. ಹಕ್ಕಿ ಪಿಚಿಕೆ ಹಾಕಿಸಿದೆಯಾ ಲೋಫರ್ ನನ್ಮಗನೇ...' ಎನ್ನುವಂತೆ ಅದರ ಚಾಲಕ ನನ್ನನ್ನೆ ದುರುಗುಟ್ಟಿ ನೋಡಿದ. ನಾನು ಏನೂ ಗೊತ್ತೇ ಇಲ್ಲವೆಂಬಂತೆ ಸುಮ್ಮನೆ ಕುಳಿತೆ. ಕುಳಿತಲ್ಲೇ ಹಕ್ಕಿಯನ್ನು ಬೆದರಿಸಲು ನೋಡಿದ ಆತ ಅದು ಫಲಿಸದಿದ್ದಾಗ ಎಡಬಾಗಿಲಿನ ಆಟೊಮೆಟಿಕ್ ಗಾಜನ್ನು ಕೆಳಗಿಳಿಸಿ ದೊಡ್ಡ ಸ್ವರದಲ್ಲಿ, ''ಶೂ ಶೂ'' ಅಂದ. ಹಕ್ಕಿ ಅಲ್ಲಿಂದ ಹಾರಿ ಪುನಃ ನನ್ನ ಬಲಗಡೆಯ ವೈಪರಿನ ಮೇಲೆ ಬಿಡಾರ ಹಾಕಿತು. ಹಕ್ಕಿ ಪುನಃ ನನ್ನ ಕಾರಿನ ಮೇಲೆ ಬಂದದ್ದು ನೋಡಿ ಆತ ಸಂತಸ ಪಟ್ಟ. ನನ್ನ ಕಾರಿನ ಮೇಲೂ ಪಿಚಿಕೆ ಹಾಕಲೆಂದು ಹಾರೈಸಿರಲಿಕ್ಕೂ ಸಾಕು... ಮುಂದೆ ರಸ್ತೆಯಿಡೀ ಇದೇ ರೀತಿ ಚಾಲಕರ ಕೆಂಗಣ್ಣಿಗೆ ಗುರಿಯಾಗುವ ಬದಲು ಅದು ಅಲ್ಲೇ ಕುಳಿತಿರಲಿ ನನಗೇನು ಎಂದುಕೊಂಡೆ. ಸ್ವಲ್ಪ ಹೊತ್ತು ಸುಮ್ಮನಿದ್ದ ಹಕ್ಕಿ ಮತ್ತೆ ವೈಪರಿನ ಮೇಲೆ ಆಚೀಚೆ ಕ್ಯಾಟ್ ವಾಕ್ ಮಾಡಲಾರಂಭಿಸಿತು. ಮುಂದಿನ ಸಿಗ್ನಲ್ಲಿನಲ್ಲಿ ಪೊಲೀಸಿನವ ಅತ್ತಿತ್ತ ತಿರುಗಿ ಟ್ರಾಫಿಕ್ ನಿಯಂತ್ರಿಸುವಂತೆಯೇ ಹಕ್ಕಿಯೂ ಕುಳಿತಲ್ಲಿಯೇ ತಿರುಗಿ ತನ್ನ ಒಂದು ಕಾಲೆತ್ತಿ ಸಿಗ್ನಲ್ ಹಾಕಿತು. ಪೊಲೀಸಿನವ ಚಲಿಸುವಂತೆ ಸೂಚಿಸುತ್ತಲೇ